**ಮೆ: ಡಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್, ಇವರು ಯಾದವಾಡ ಗ್ರಾಮದ ವಿವಿಧ ಸರ್ವೆ ನಂಬರ್‌ಗಳು, ಮೂಡಲಗಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ, ಹಾಲಿ ಕಾರ್ಯನಿರ್ವಹಿಸುತ್ತಿರುವ ಸಂಯೋಜಿತ ಸಿಮೆಂಟ್ ಸ್ಥಾವರದಲ್ಲಿ ಕ್ಲಿಂಕರ್ ಉತ್ಪಾದನಾ ಸಾಮರ್ಥ್ಯವನ್ನು 2.6 ರಿಂದ 9.1, ಮಿಲಿಯನ್ ಟನ್‌ಗಳು ಪ್ರತಿ ವರ್ಷಕ್ಕೆ, ಸಿಮೆಂಟ್ ಸಾಮರ್ಥ್ಯವನ್ನು 2.5 ರಿಂದ 9.0 ಮಿಲಿಯನ್ ಟನ್‌ಗಳು ಪ್ರತಿ ವರ್ಷಕ್ಕೆ, 12 ರಿಂದ 42 ಮೆ.ವ್ಯಾ ಸಾಮರ್ಥ್ಯದ ವ್ಯರ್ಥ ಉತ್ಪಾದನಾ ಶಾಖ ಬಳಸಿ ವಿದ್ಯುತ್ ಉತ್ಪಾದಿಸುವ ಘಟಕ ಮತ್ತು ಡಿ.ಜಿ. ಸೆಟ್ ಸಾಮರ್ಥ್ಯವನ್ನು 1000 ಕೆ.ವಿ.ಎ. ಯಿಂದ 3000 ಕೆ.ವಿ.ಎ.ಗೆ ವಿಸ್ತರಣೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ಹಿನ್ನೆಲೆಯಲ್ಲಿ ನಡೆದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

ದಿನಾಂಕ: 27–08–2021.

ವೇಳೆ: ಬೆಳಿಗ್ಗೆ 11:00 ಘಂಟೆ,

ಸ್ಥಳ: ಮೆ: ಡಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್, ಯಾದವಾಡ ಗ್ರಾಮ, ಮೂಡಲಗಿ ತಾಲ್ಲೂಕ, ಬೆಳಗಾವಿ.

ಮೆ: ಡಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್, ಇವರು ಯಾದವಾಡ ಗ್ರಾಮದ ವಿವಿಧ ಸರ್ವೆ ನಂಬರ್‌ಗಳು, ಮೂಡಲಗಿ ತಾಲ್ಲೂಕ, ಬೆಳಗಾವಿ ಜಿಲ್ಲೆಯಲ್ಲಿ, ಹಾಲಿ ಕಾರ್ಯನಿರ್ವಹಿಸುತ್ತಿರುವ ಸಂಯೋಜಿತ ಸಿಮೆಂಟ್ ಸ್ಥಾವರದಲ್ಲಿ ಕ್ಲಿಂಕರ್ ಉತ್ಪಾದನಾ ಸಾಮರ್ಥ್ಯವನ್ನು 2.6 ರಿಂದ 9.1, ಮಿಲಿಯನ್ ಟನ್‌ಗಳು ಪ್ರತಿ ವರ್ಷಕ್ಕೆ,ಸಿಮೆಂಟ್ ಸಾಮರ್ಥ್ಯವನ್ನು 2.5 ರಿಂದ 9.0 ಮಿಲಿಯನ್ ಟನ್‌ಗಳು ಪ್ರತಿ ವರ್ಷಕ್ಕೆ, 12 ರಿಂದ 42 ಮೆ.ವ್ಯಾ ಸಾಮರ್ಥ್ಯದ ವ್ಯರ್ಥ ಉತ್ಪಾದನಾ ಶಾಖ ಬಳಸಿ ವಿದ್ಯುತ್ ಉತ್ಪಾದಿಸುವ ಘಟಕ ಮತ್ತು ಡಿ.ಜಿ. ಸೆಟ್ ಸಾಮರ್ಥ್ಯವನ್ನು 1000 ಕೆ.ವಿ.ಎ. ಯಿಂದ 3000 ಕೆ.ವಿ.ಎ.ಗೆ ವಿಸ್ತರಣೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.ಈ ಬಗ್ಗೆ ದಿನಾಂಕ: 27–08–2021 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ: ಡಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್, ಯಾದವಾಡ ಗ್ರಾಮ, ಮೂಡಲಗಿ ತಾಲ್ಲೂಕ, ಬೆಳಗಾವಿ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ–1 |
| ಹಾಜರಿದ್ದ ಕಾರ್ಖಾನೆಯ ಪ್ರತಿನಿಧಿಗಳ ವಿವರ | : | ಅನುಬಂಧ–2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ–3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ–4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ–5 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : | ಅನುಬಂಧ–6 |
| ಕಾರ್ಖಾನೆಯ ಪ್ರತಿನಿಧಿಗಳು ಸಾರ್ವಜನಿಕರ ಅಹವಾಲಿಗೆ ನೀಡಿದ ಲಿಖಿತ ಉತ್ತರ | : | ಅನುಬಂಧ–7 |

**ಪೀಠಿಕೆ:**

ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ಭಾರತ ಸರಕಾರ, ಇವರು ದಿನಾಂಕ 14–09–2006 (ತಿದ್ದುಪಡಿ ದಿನಾಂಕ 01–12–2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯ ವಿಸ್ತರಣೆಗಾಗಿ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಪರಿಸರ ಕುರಿತು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಮತ್ತು ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ (ಆಘಾತ ಅಧ್ಯಯನ ವಿಭಾಗ) ಇವರು ಸದರಿ ಯೋಜನೆಯ Terms of Reference ಪತ್ರ ಸಂಖ್ಯೆ: F.No.J-11011/119/2007-IA-II (I)ದಿನಾಂಕ: 26–09–2019ರಂದು ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಕೋರುವಂತೆ **ಮೆ: ಡಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್, ಯಾದವಾಡ ಗ್ರಾಮ, ಮೂಡಲಗಿ ತಾಲ್ಲೂಕ, ಬೆಳಗಾವಿ** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 17–12–2020 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ

ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ಉದ್ದೇಶಿತ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಕರಡು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ **"ಪ್ರಜಾವಾಣಿ" (ಕನ್ನಡ), 27-07-2021** ರಂದು **"ದಿ ಹಿಂದೂ" (ಆಂಗ್ಲಭಾಷೆ)** 27-07-2021 ರಂದು ಹಾಗೂ ಸ್ಥಳೀಯ ಮಟ್ಟದ**"ವಿಜಯವಾಣಿ"** (ಕನ್ನಡ) ಪತ್ರಿಕೆಯಲ್ಲಿ 29-07-2021 ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು, ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 27-08-2021 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಜಗದೀಶ. ಐ. ಎಚ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು **ಶ್ರೀ ಆಶೋಕ ದುಡಗುಂಟಿ**ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, **ಶ್ರೀ. ವಿಜಯಕುಮಾರ ಕಡಕಬಾವಿ**, ವಲಯ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಧಾರವಾಡ, ಮತ್ತು ಮೂಡಲಗಿ ತಹಶೀಹಲ್ದಾರರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಒಂಬತ್ತು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ವಿಸ್ತರಣೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಉದ್ದಿಮೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಜೆ. ಎಮ್. ಎನ್ವಿರೊನೆಟ್‌ಪ್ರೈವೆಟ್ ಲಿಮಿಟೆಡ್ ಜೈಪೂರಇವರು ಯೋಜನೆಯ ವಿಸ್ತರಣೆ ಕುರಿತು ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

**ಶ್ರೀ. ವಿಜಯಕುಮಾರ ಕಡಕಬಾವಿ,ವಲಯ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಧಾರವಾಡ** ಇವರು ಮಾತನಾಡುತ್ತಾ ಎಲ್ಲರಿಗೂ ನಮಸ್ಕಾರಗಳನ್ನು ತಿಳಿಸುತ್ತಾ ಇವತ್ತು ಮೆ: ಡಾಲ್ಮಿಯಾ ಸಿಮೆಂಟ್ (ಭಾರತ್) ಲಿಮಿಟೆಡ್, ಅವರು ಈಗಾಗಲೇ ಕಾರ್ಯನಿರ್ವಹಿಸತಕ್ಕಂತಹ ಉದ್ದಿಮೆಯಲ್ಲಿ Expansion ಮಾಡಬೇಕು ಎಂದು ಉದ್ದೇಶಿಸಿದ್ದಾರೆ. ಅದಕ್ಕೆ ಕ್ಲಿಂಕರ್ ಸಾರ್ಮಥ್ಯವನ್ನು 2.6 ಮಿಲಿಯನ್ ಟನ್ಸ್‌ಯಿಂದ 9.1 ಮಿಲಿಯನ್ ಟನ್ಸ್‌ಗಳವರೆಗೆ ಹಾಗೂ ಸಿಮೆಂಟ್ ಸಾಮರ್ಥ್ಯವನ್ನು 2.5 ಮಿಲಿಯನ್ ಟನ್ಸ್‌ನಿಂದ 9.0 ಮಿಲಿಯನ್ ಟನ್ಸ್‌ವರೆಗೆ,ಇನ್ನು ಒಂದು 12 ರಿಂದ 42 ಮೆಗಾವ್ಯಾಟ ಸಾಮರ್ಥ್ಯದ ವ್ಯರ್ಥ ಉತ್ಪಾದನಾ ಶಾಖ ಬಳಸಿ ವಿದ್ಯುತ ಉತ್ಪಾದಿಸುವ ಘಟಕವನ್ನು Extension ಮಾಡಬೇಕು ಅಂತ ಯೋಜನೆ ನಿರೂಪಿಸಿದ್ದಾರೆ. ಆದರೆ ಇತಂಹ ಒಂದು ಮೆಗಾಪ್ರೊಜೆಕ್ಟ್ ಅದರಲ್ಲಿ ಸಿಮೆಂಟ್ Industryಅಂದ ತಕ್ಷಣವೇ ಮೇಜರ Air polluting industry ಆಗಿರುವುದರಿಂದ ಮತ್ತು ಅದನ್ನು Highly polluting 17 Category ಇಂಡಸ್ಟ್ರಿಗಳ ಒಂದು ಭಾಗವಾಗಿರುವದರಿಂದ, ಅಂತಹ ಒಂದು ಪ್ರೊಜೆಕ್ಟಗಳಿಗೆ ಭಾರತ ಸರಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯ ಮತ್ತು ಹವಾಮಾನ ಬದಲಾವಣೆ ಇಲಾಖೆವತಿಯಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

ಇದು 2006ರ ಒಂದು EIA Notification ಪ್ರಕಾರ, Environmental Public Hearing ಮಾಡಿ ಸ್ಥಳೀಯವಾಗಿರತಕ್ಕಂತಹ ಜನರ ಅಭಿಪ್ರಾಯಗಳನ್ನು ಪರಿಗಣಿಸಿ ಅವರ ಒಂದು ಸಲಹೆ ಸೂಚನೆಗಳನ್ನು ಪಡೆದುಕೊಂಡು ಅದರ ಮೇರೆಗೆ ಈಗಾಗಲೇ ತಯಾರಿಸಿರತಕ್ಕಂತಹ Draft Environmental Impact Assisment Reportನಲ್ಲಿ ಅದನ್ನಾ ಸೇರಿಸಿಕೊಂಡು ಕ್ರೋಢಿಕರಿಸಿ, Final ವರದಿಯನ್ನು ಕೇಂದ್ರ ಸರಕಾರದ ಅರಣ್ಯ, ಪರಿಸರ ಮಂತ್ರಾಲಯಕ್ಕೆ ಸಲ್ಲಿಸಿದಾಗ ಅದನ್ನು ಪರಿಗಣಿಸಿ ಭಾರತ ಸರಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಇವರಿಗೆ ಒಂದು ಪರಿಸರ ವಿಮೋಚನಾ ಪತ್ರವನ್ನು ನೀಡುತ್ತಾರೆ.

ಅದಕ್ಕೆ ಇಂತಾ ಒಂದು ಪರಿಸರ ವಿಮೋಚನಾ ಪತ್ರ ಪಡಿಯಬೇಕಂತಂದ್ರೆ, ಒಂದು ಪ್ರೋಸಿಜರನ್ನಾ EIA ನೋಟಿಫಿಕೇಶನ್ 2006ನಲ್ಲಿ ಈಗಾಗಲೇ ನಮಗೆ Notify ಮಾಡಿದ್ದಾರೆ. ಆ procedure ಪ್ರಕಾರವೇ ನಾವೂ ಆ TOR (terms of reference) ಅನ್ನತಕ್ಕದ್ದನ್ನ MOEF ನೀಡಿದ ಬಳಿಕ TOR (terms ಪ್ರಕಾರ EIA Notification ready ಮಾಡಿ, ಅದನ್ನು ನಮ್ಮ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಕಛೇರಿಗೆ ಸಲ್ಲಿಸಿರುತ್ತಾರೆ. TOR ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಕುರಿತು ಸಾರ್ವಜನಿಕ ಸಭೆಯನ್ನು ಏರ್ಪಾಟ ಮಾಡಿ ಅನ್ನತಕ್ಕಂತಹ ನಿರ್ದೇಶನದ ಮೇರೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯು ಪತ್ರದ ಮುಖಾಂತರ ನಾವು ಜಿಲ್ಲಾಧಿಕಾರಿಗಳ ಅನುಮತಿಯೊಂದಿಗೆ ಅಂದರೆ 45 ದಿವಸ ಮುಂಚಿತವಾಗಿ ಇಂತಹಜಾಗದಲ್ಲಿ 27ನೇ ತಾರೀಖು ನಾವು ಪರಿಸರ ಕುರಿತು